**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.**

ಸಿಸಿ ನಂ. 104/2023

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀ ಗೋಪಾಲ |
| ತಂದೆಯ ಹೆಸರು | : | ಶೇಖರ ನಾಯ್ಕ |
| ವರ್ಷ | : | 36 ವರ್ಷ |
| ಉದ್ಯೋಗ | : | ಚಾಲಕ |
| ವಾಸ್ತವ್ಯ | : | ಹಳೇ ಹೆರವಟ್ಟಾ, ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 05-05-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎಸ್ ಜೆ ಎನ್ ವಕೀಲರಿಂದ :**

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ . ನಾನು ಫಿರ್ಯಾದಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿಲ್ಲ . ನಾನು ಸಾಯಿಬಾಬಾ ನವೋದಯ ಸಂಘದ ಸದಸ್ಯನು ಆಗಿರುವುದಿಲ್ಲ . ಸಾಯಿಬಾಬಾ ನವೋದಯ ಸಂಘದ ಬಗ್ಗೆ ನನಗೆ ಮಾಹಿತಿ ಇಲ್ಲ . ನಾನು ಫಿರ್ಯಾದು ಬ್ಯಾಂಕಿಗೆ ಚೆಕ್ ನ್ನು ಕೊಟ್ಟಿರುವುದಿಲ್ಲ . ಚೆಕ್ ನಲ್ಲಿರುವ ಸಹಿ ನನ್ನದ್ದಲ್ಲ . ನನಗೆ ಯಾವುದೇ ನೋಟಿಸು ಜಾರಿಯಾಗಿಲ್ಲ . ನಿಪಿ-4 ರಲ್ಲಿರುವ ವಿಳಾಸ ನನ್ನದ್ದಲ್ಲ . ನನ್ನ ವಿಳಾಸ ಹಳೇ ಹೆರವಟ್ಟಾ , ಹಂದಿಹೂಣೆ , ನಿರ್ಮಲಾ ಕಾನ್ವೆಂಟ್ ಶಾಲೆಯ ಹಿಂದೆ ಇರುತ್ತದೆ . ನಿಪಿ-7 ರಿಂದ ನಿಪಿ-10 ರಲ್ಲಿರುವ ಸಹಿ ನನ್ನದ್ದಲ್ಲ . ನಾನು ಫಿರ್ಯಾದು ಬ್ಯಾಂಕಿಗೆ ಯಾವುದೇ ಹಣವನ್ನು ನೀಡುವುದು ಬಾಕಿ ಇಲ್ಲ . ಸಾಯಿಬಾಬಾ ನವೋದಯ ಸಂಘ ಮಾಡಿಕೊಂಡು ನಾನು ಯಾವುದೇ ಸಾಲವನ್ನು ಪಡೆದಿಲ್ಲ .

ಸಿಸಿನಂ. 104/2023

ಡಿಡಬ್ಲ್ಯೂ: 1

2. ಸಾಕ್ಷಿ ಸಿಸಿ ನಂ. 793/2018 ರ ಆದೇಶ ಪುಟಗಳ ದೃಢಿಕೃತ ನಕಲನ್ನು ಹಾಜರು ಪಡಿಸಿದ್ದು ನಿಡಿ-1 ಎಂದು ಗುರುತಿಸಲಾಯಿತು . ಸಿಸಿ ನಂ. 793/2018 ರ ದೂರಿನ ದೃಢಿಕೃತ ನಕಲನ್ನು ನಿಡಿ-2 ಎಂದು ಗುರುತಿಸಲಾಯಿತು. ಸಿಸಿ ನಂ. 793/2018 ರಲ್ಲಿ ಫಿರ್ಯಾದುದಾರರು ಹಾಜರು ಪಡಿಸಿದ ಅಧಿಕಾರ ಪತ್ರದ ದೃಢಿಕೃತ ನಕಲನ್ನು ನಿಡಿ-3 ಎಂದು ಗುರುತಿಸಲಾಯಿತು . ಸಿಸಿ ನಂ. 793/2018 ರಲ್ಲಿ ಹಾಜರು ಪಡಿಸಿದ ಚೆಕ್ ನ ದೃಢಿಕೃತ ನಕಲನ್ನು ನಿಡಿ-4 ಎಂದು, ಸಿಸಿ ನಂ. 793/2018 ರಲ್ಲಿ ಹಾಜರು ಪಡಿಿದ ಬ್ಯಾಂಕಿನ ಹಿಂಬರಹದ ದೃಢಿಕೃತ ನಕಲನ್ನು ನಿಡಿ-5 ಎಂದು , ಸಿಸಿ ನಂ. 793/2018 ರಲ್ಲಿ ನೀಡಿದ ನೋಟಿಸಿನ ದೃಢಿಕೃತ ನಕಲನ್ನು ನಿಡಿ-6 ಎಂದು, ಅಂಚೆ ರಸೀದಿಯ ದೃಡಿಕೃತ ನಕಲನ್ನು ನಿಡಿ -7 ಎಂದು, ಅಂಚೆ ಸ್ವೀಕೃತಿಯ ದೃಢಿಕೃತ ನಕಲನ್ನು ನಿಡಿ-8 ಎಂದು, ಸಾಲದ ಅರ್ಜಿಯ ದೃಡಿಕೃತ ನಕಲನ್ನು ನಿಪಿ-9 ಎಂದು, ಶಿಫಾರಸ್ಸು ವರದಿಯ ದೃಢಿಕೃತ ನಕಲನ್ನು ನಿಪಿ-10 ಎಂದು ಗುರುತಿಸಲಾಯಿತು .

ಆದ್ದರಿಂದ ಫಿರ್ಯಾದುದಾರರು ನನ್ನ ವಿರುದ್ಧ ದಾಖಲಿಸಿರುವ ಈ ಸುಳ್ಳು ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

(ಫಿರ್ಯಾದು ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.